## 20

# ಯೆಹೂದ್ಯರು ಯೇಸುವನ್ನು ತಿರಸ್ಕರಿಸಿದ್ದು ಯಾಕೆ

"ಅವನನ್ನು ಶಿಲುಬೆಗೆ ಹಾಕಿಸು"; "ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ!" (ಮತ್ತಾಯ 27:22ಬಿ, 25ಬಿ). ಇಡೀ ಚರಿತ್ರೆಯಲ್ಲಿ ತನ್ನ ಸ್ವಂತ ಜನರಿಂದ ಯೇಸುವು ತಿರಸ್ಕರಿಸಲ್ಪಟ್ಟಿದ್ದಕ್ಕೆ ಸಮಾನವಾದದ್ದು ಯಾವುದೂ ಇಲ್ಲ. ಈ ವಿನಾಶಕವಾದದ್ದನ್ನು ನಾವು ಹೇಗೆ ಎಣಿಸಬಹುದು? ಯೆಹೂದ್ಯರು ತಮ್ಮ ಮೆಸ್ಸೀಯನಿಗಾಗಿ ಮುನ್ನೋಡುತ್ತಿದ್ದರು. ಆದುದರಿಂದ ಆತನು ಬಂದಾಗ ಯಾಕೆ ಆತನನ್ನು ತಿರಸ್ಕರಿಸಿದರು?

### ಆತನು ಅವರನ್ನು ನಿರಾಶೆಗೊಳಿಸಿದನು

ಯೇಸು ಯೆಹೂದ್ಯರಿಗೆ ನಿರಾಶಾದಾಯಕನಾಗಿದ್ದನು. ಮೆಸ್ಸೀಯನು ಬರುವದಕ್ಕಿಂತ ಮೊದಲೇ ಆತನ ಬಗ್ಗೆ ಅವರು ತೀರ್ಮಾನ ಮಾಡಿಕೊಂಡಿದ್ದರು. ರೂಪ ರಚನೆ ಅವರಿಗೆ ಸಿದ್ಧವಾಗಿದ್ದು ಅವರು ಕಾಯುತ್ತಿದ್ದರು. ಆ ರೂಪ ರಚನೆಯಲ್ಲಿ ಹೊಂದಿಕೊಳ್ಳುವದನ್ನು ಆತನು ನಿರಾಕರಿಸಿದಾಗ ಅವರಿಗೆ ಅತಿ ದೊಡ್ಡ ನಿರಾಶೆಯಾಯಿತು. ದಾವೀದನ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಬರಲಿಕ್ಕಿದ್ದ ಅರಸನ ಬಗ್ಗೆ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಅವರು ಓದಿದ್ದರು. ಅವರು ಅವುಗಳಿಗೆ ಅಕ್ಷರಶಃವಾದ ನಂಬಿಕೆ ಬೆಳಿಸಿಕೊಂಡಿದ್ದರು. ಅವರು ಭೂಲೋಕದ ಅರಸನನ್ನು ನಿರೀಕ್ಷಿಸಿದ್ದರು. ಒಂದು ಸಲ ಯೇಸು "ಅಡಗಿ ಕೊಂಡನು" (ಯೋಹಾನ 8:59). ಯಾಕಂದರೆ ಅವರು ಒತ್ತಾಯದಿಂದ ಆತನನ್ನು ಅರಸನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದರು (ಯೋಹಾನ 6:15). ರಾಜ್ಯದ ಬಗ್ಗೆ ಈ ತಪ್ಪಾದ ತಿಳುವಳಿಕೆಯು ಶಿಷ್ಯರಲ್ಲಿಯೂ ಇತ್ತು. ರಾಜ್ಯದಲ್ಲಿ ಯಾರು ಹೆಚ್ಚಿನವರಾಗಿರುವರು ಎಂಬುದರ ಬಗ್ಗೆ ಅವರು ಸತತವಾಗಿ ಚರ್ಚಿಸುತ್ತಿದ್ದರು. "ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು" (ಲೂಕ 24:21) ಎಂದು ಯೇಸುವಿನ ಮರಣದ ನಂತರ ಶಿಷ್ಯರು ದುಃಖಪಟ್ಟರು. ಅಪೊಸ್ತಲರ ಕೃತ್ಯ 1ರ ಸಂವಾದವು ಪುನರುತ್ಥಾನದ ನಂತರವೂ ರಾಜ್ಯದ ಸ್ವಭಾವದ ಬಗ್ಗೆ ಶಿಷ್ಯರು ಅರ್ಥಮಾಡಿಕೊಂಡಿರಲಿಲ್ಲ ಎಂಬುದನ್ನು ಪ್ರಕಟಿಸುತ್ತದೆ.

ತನ್ನ ರಾಜ್ಯವು ಈ ಲೋಕದ್ದಲ್ಲ ಎಂದು ಯೇಸು ಅವರಿಗೆ ಹೇಳಿದಾಗ ಯೆಹೂದ್ಯರಿಗೆ ನಿರಾಶೆಯಾಯಿತು. ತಾನು ಕೈಸರನಿಗೆ ವಿರೋಧಿಯಲ್ಲವೆಂದು ಆತನು ಸ್ಪಷ್ಟಪಡಿಸಿದನು. ಆದರೆ ಅವರು ಆ ರೀತಿಯ ರಾಜ್ಯವನ್ನು ಬಯಸಿದ್ದರು. ಅವರು

ಮೊದಲೇ ನಿರ್ಣಯಿಸಿಕೊಂಡಿದ್ದರು; ಅವರು ಪೂರ್ವ ಕಲ್ಪಿತ ಅಭಿಪ್ರಾಯವುಳ್ಳವರಾಗಿದ್ದರು. ಪೂರ್ವಕಲ್ಪಿತ ಅಭಿಪ್ರಾಯವು ಅನೇಕರು ಯೇಸುವನ್ನು ಸ್ವೀಕರಿಸುವದಕ್ಕೆ ಆತಂಕವನ್ನೊಡ್ಡುತ್ತಲಿದೆ, ಆತನ ವಾಕ್ಯವನ್ನು ಸಂಶೋಧಿಸುವ ಮೊದಲೇ ಅವರ ಮನಸ್ಸುಗಳು ನಿರ್ಣಯಿಸಿಕೊಂಡಿರುತ್ತವೆ. ಅವರ ನಿರೀಕ್ಷೆಗಳಿಗೆ ಆತನು ಹೊಂದಿಕೊಳ್ಳದಿದ್ದರೆ ಅವರು ಆತನಿಂದ ಹೊರಟು ಹೋಗುತ್ತಾರೆ.

## ಅವರ ಭೌತಿಕವಾದವನ್ನು ಆತನು ಖಂಡಿಸಿದನು

ಭೌತಿಕ ಯೋಜನೆ ಹಾಗೂ ಜೀವನವು ಯೇಸುವಿನಿಂದ ಖಂಡಿಸಲ್ಪಟ್ಟಿತು. ಜನರು ತಮ್ಮ ಜೀವನ ಶೈಲಿಯ ಮೇಲಿನ ದಾಳಿಯನ್ನು ಪ್ರತಿಭಟಿಸಿದರು. ಯೇಸುವು ಗಲಿಲಾಯ ಸಮುದ್ರವನ್ನು ದಾಟಿ ಗೆರಸೇನರ ಸೀಮೆಗೆ ಹೋಗುವದನ್ನು ಓದುತ್ತೇವೆ (ಲೂಕ 8:26-39; ಮಾರ್ಕ 5:1-20). ಅನೇಕ ದುರಾತ್ಮಗಳಿದ್ದ ಮನುಷ್ಯನು ಆತನನ್ನು ಭೇಟಿಯಾದನು. ಯೇಸು ಅವನನ್ನು ಗುಣಪಡಿಸಿದನು. ದುರಾತ್ಮಗಳು ಹಂದಿಯ ಗುಂಪಿನೊಳಗೆ ಹೋದವು. ಹಂದಿಗಳು ಮುಳುಗಿ ಹೋದನಂತರ ಯಜಮಾನರು ಪ್ರದೇಶವನ್ನು ಬಿಟ್ಟು ಹೋಗಬೇಕೆಂದು ಯೇಸುವನ್ನು  ಕೇಳಿದರು. ಎರಡು ಸಾವಿರ ಹಂದಿಗಳು ದೊಡ್ಡ ಹಾನಿಯಾದವು! ಬಟ್ಟೆ ಧರಿಸಿ ಸರಿಯಾದ ಬುದ್ಧಿಯಿಂದ ಇದ್ದ ಮನುಷ್ಯನ ಸಂಗತಿ ಅವರಿಗೆ ಯಾವ ಅರ್ಥವಾಗಲಿಲ್ಲ.

ಯೇಸುವಿನ ಬೋಧನೆಗಳು ಭೌತಿಕ ವಿಷಯಗಳನ್ನು ಕಡಿಮೆ ಮಾಡಿ ಆತ್ಮಿಕ ವಿಷಯಗಳನ್ನು ಮೇಲಕ್ಕಿಟ್ಟಿತು. ಐಶ್ವರ್ಯಗಳನ್ನು ಹುಡುಕುವ ವ್ಯರ್ಥ ಪ್ರಯತ್ನಗಳ ಬಗ್ಗೆ ಯೇಸು ಬಹಳ ಹೇಳಿದ್ದಾನೆ. "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ 16:26). ವಿಚಾರ ಪ್ರಚೋದಕ ಪ್ರಶ್ನೆಗಳನ್ನು ಯೇಸು ಮುಂದಿಟ್ಟನು. ದೈಹಿಕ ಬಂಧನಗಳಿಗಿಂತ ಆತ್ಮಿಕ ಬಂಧನಗಳು ಬಲವಾದವುಗಳಾಗಿವೆ. ದೇಹಕ್ಕಿಂಥ ಆತ್ಮಕ್ಕೆ ಪ್ರಾಮುಖ್ಯತೆಯಿರುತ್ತದೆ. ಭೂಲೋಕದ ಸರಕಾರಗಳ ಮೇಲೆ ಪರಲೋಕ ರಾಜ್ಯದ ಪ್ರಾಧಾನ್ಯತೆ ಯಿರುವುದು. ಕೈಸರನ ಮೇಲೆ ದೇವರು ಇರುವನು ಎಂದು ಆತನು ಬೋಧಿಸಿದನು. ತಾವು ಕೇವಲ ಮಾಂಸ, ರಕ್ತವೆಂದು ಮಾತ್ರವೇ ಜೀವಿಸಲು ಬಯಸುವವರು ಆತನನ್ನು ಪ್ರೀತಿಸುವದಿಲ್ಲ! ಇಂದೂ ಭಿನ್ನತೆ ಇರುವದಿಲ್ಲ: ದೇವರಿಗಿಂತ ಹೆಚ್ಚಾಗಿ ವಸ್ತುಗಳನ್ನು ಪ್ರೀತಿಸುವವರು ಕ್ರಿಸ್ತನ ಬೋಧನೆಗಳ ಮೇಲೆ ಬೇಸರಗೊಂಡು ಆತನನ್ನು ತಿರಸ್ಕರಿಸುವರು.

## ಆತನು ಅವರ ಸಾಂಪ್ರದಾಯಗಳನ್ನು ಖಂಡಿಸಿದನು

ಯೇಸು ತನ್ನ ದಿನದ ಧಾರ್ಮಿಕ ಪದ್ಧತಿಗಳನ್ನೂ ಸಾಂಪ್ರಾದಾಯಗಳನ್ನೂ ಖಂಡಿಸಿದನು. ಫರಿಸಾಯರೂ ಸದ್ದುಕಾಯರೂ ಯೆಹೂದ್ಯರಲ್ಲಿ ಬಹಳ ಪ್ರಮುಖವಾದ ಪಂಗಡಗಳಾಗಿದ್ದರು. ಅವರ ಹೃದಯಗಳು ಆತನಿಂದ ದೂರವಾಗಿದ್ದ ತುಟಿಯ ಆರಾಧನೆಯನ್ನು ಯೇಸು ಖಂಡಿಸಿದನು. ಅವರ ಆರಾಧನೆಯನ್ನು ವ್ಯರ್ಥವಾದ ಆರಾಧನೆಯೆಂದು ಹೇಳಿದನು. ಯಾಕಂದರೆ ಅದು ಮನುಷ್ಯನ ಉಪದೇಶದ ಪ್ರಾಕಾರವಾಗಿತ್ತು (ಮಾರ್ಕ 7:6, 7). ಆತನು ಅವರನ್ನು ಕಪಟಿಗಳು ಎಂದು ಕರೆದನು.

ಯೇಸುವಿನಿಂದ ಯೆಹೂದ್ಯರು ಕೋಪಿಸಿಕೊಂಡಾಗ, ಅವರ ಪ್ರಾಥಮಿಕ ಆಕ್ಷೇಪಣೆಯು ಆತನು ಬೋಧಿಸಿದ ಸಕಾರಾತ್ಮಕ ಸತ್ಯಗಳಿಗಾಗಿ ಇರಲಿಲ್ಲ. ಆತನು ಹೇಳಿದ ಅನೇಕ

ಸತ್ಯಗಳು ಗ್ರಹಿಸಲಿಕ್ಕೆ ಅವರಿಗೆ ಕ್ರಾಂತಿಕಾರಕವಾದವುಗಳೂ ಕಠಿಣವಾದವುಗಳೂ ಆಗಿದ್ದವು. ಆದರೆ ಅದು ನಿಜವಾದ ಸಮಸ್ಯೆಯಾಗಿರಲಿಲ್ಲ. ಆತನು ತಪ್ಪನ್ನು ಬಹಿರಂಗ ಪಡಿಸಿದ್ದು ಜನರನ್ನು ಬೇಸರಗೊಳಿಸಿತು, ಯಾಕಂದರೆ ಅವರು ಬದಲಾಗಲು ಮನಸ್ಸುಳ್ಳವರಾಗಿರಲಿಲ್ಲ. ಆತನ ವಾಕ್ಯಗಳು ಈ ತಾಸಿನಲ್ಲಿಯೂ ಉಳಿಯಂತಿರುತ್ತವೆ. ಯೇಸುವಿನ ಬೋಧನೆಯ ಧ್ಯೇಯಗಳನ್ನು ಒಂದು ವಿವರವಾದ ಧಾರ್ಮಿಕ ಆಚರಣೆ, ಆಡಂಬರ ಹಾಗೂ ಬಾಹ್ಯ ಪ್ರದರ್ಶನ ಗಳೊಂದಿಗಿರುವ ಮಾನವ ಧರ್ಮವನ್ನು ಬೇರು ಸಹಿತ ಕಿತ್ತು ಹಾಕುವದಾಗಿತ್ತು. ಆತನು ಅವರ ಧಾರ್ಮಿಕ ಆಚರಣೆಗಳನ್ನು ಖಂಡಿಸಿದ್ದರಿಂದ, ಯೆಹೂದ್ಯರು ಯೇಸುವನ್ನು ಸ್ವೀಕರಿಸುವದನ್ನು ನಿರಾಕರಿಸಿದರು.

ತಪ್ಪು ಖಂಡಿಸಲ್ಪಡುವಾಗ ಕೋಪಗೊಳ್ಳುವವರು ಇಂದೂ ಇದ್ದಾರೆ. ಕ್ರಿಸ್ತನ ಮನಸ್ಸು ಒಬ್ಬ ವ್ಯಕ್ತಿಯಲ್ಲಿದ್ದಿರ ಬಹುದು. ಆದಾಗ್ಯೂ ಯಾವುದೇ ಆಧುನಿಕ ಧಾರ್ಮಿಕ ತತ್ವ ಇಲ್ಲವೇ ರೂಢಿಯ ಬಗ್ಗೆ ವಿಮರ್ಶಿಸುವವರಾಗಿರಬಹುದು ಎಂದು ಅವರು ಯೋಚಿಸುವಂತೆ ತೋರುವುದಿಲ್ಲ. ಹೀಗಿದ್ದರೂ ಒಬ್ಬನು ಕ್ರಿಸ್ತನಂತಾಗ ಬೇಕಿದ್ದರೆ ತಪ್ಪನ್ನು ಕಂಡುಕೊಳ್ಳುವಾಗಲೆಲ್ಲಾ ಅವನು ಅದನ್ನು ಖಂಡಿಸತಕ್ಕದ್ದು. ಕ್ರಿಸ್ತನ ಮನಸ್ಸು ಇರಬೇಕೆಂದು ಒಬ್ಬನು ಯೋಚಿಸುವುದು ಅಂದರೆ ಯಾವುದೇ ಸಂಗತಿಯೊಂದಿಗೆ ಒಪ್ಪಿಕೊಳ್ಳದಿರುವದಕ್ಕೆ ಸರಳ ಭಾವನೆಯುಳ್ಳವರಾಗಿರ ಬಾರದೆಂದು ಅರ್ಥ ಎಂದು ಯೋಚಿಸುತ್ತಾರೆ. ಆದರೆ ಅವರಿಗೆ ಕ್ರಿಸ್ತನ ಮನಸ್ಸಿನ ತಪ್ಪಾದ ವಿಚಾರವಿರುತ್ತದೆ.

## ಅವರ ಅಪೇಕ್ಷೆಗೆ ಆತನು ಬಹಳ ದೀನನಾಗಿದ್ದನು

ಯೇಸುವಿನ ದೀನಭಾವದ ಮೂಲ ಮತ್ತು ಸರಳತೆಯ ನಿಮಿತ್ತವಾಗಿ ಆತನನ್ನು ಯೆಹೂದ್ಯರು ತಿರಸ್ಕರಿಸಿದರು. ಆತನು ನಜರೇತಿನಿಂದ ಬರಲಿಕ್ಕಿರುವ ಅವರ ನಿರೀಕ್ಷೆಯೊಂದಿಗೆ ಅದು ಯಾವುದೇ ರೀತಿಯ ಸಾಮರಸ್ಯದಲ್ಲಿ ಇರಲಿಲ್ಲ. ಬೆತ್ಲೆಹೇಮಿನಲ್ಲಿಯ ಆತನ ಜನನವು ಅರಸುತನಕ್ಕಾಗಿ ನಿರೀಕ್ಷಿಸಲ್ಪಟ್ಟಂಥ ಸಂಗತಿಯಾಗಿರಲಿಲ್ಲ. ಯೇಸುವು ತನ್ನ ನಾಡಿಗೆ ಅದ್ಭುತಗಳನ್ನು ಮಾಡುತ್ತಾ ಬಂದಾಗ, "ಈತನು ಆ ಬಡಗಿಯ ಮಗನಲ್ಲವೇ?" ಎಂದು ಜನರು ಪ್ರಶ್ನಿಸಿದರು (ಮತ್ತಾಯ 13:55ಎ) ಯೇಸುವು ಬಹಳ ಸರಳವಾಗಿದ್ದನು, ಬಹಳ ದೀನನಾಗಿದ್ದನು.

ಜನರ ನಂಬಿಕೆಯನ್ನು ಪರಿಕ್ಷಿಸಲು, ಸರಳವಾದ ಸಂಗತಿಯನ್ನು ಮಾಡಲು ಯೇಸು ಅವರಿಗೆ ಕೊಟ್ಟನು. ಉದಾಹರಣೆಯಾಗಿ, ಯೋಹಾನ 9:6, 7ರಲ್ಲಿ ಕುರುಡು ಭಿಕ್ಷಕನಿಗೆ ಹೋಗಿ ತನ್ನ ಕಣ್ಣುಗಳಿಂದ ಕೆಸರನ್ನು ತೊಳೆದು ಕೊಳ್ಳಲು ಹೇಳಿದನು. ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ದೇವರು ಆಯ್ದುಕೊಂಡನು ಎಂದು ಪೌಲನು ಸಾಕ್ಷಿ ಹೇಳಿದನು (1 ಕೊರಿಂಥ 1:27, 28).

ಹಳೇ ಒಡಂಬಡಿಕೆಯಲ್ಲಿ, ನಾಮಾನನ ಕಥೆಯಲ್ಲಿ ಇದೇ ತತ್ವದ ಶ್ರೇಷ್ಠವಾದ ಉದಾಹರಣೆ ಇರುವುದು (2 ಅರಸು 5). ತನ್ನ ಕುಷ್ಠ ರೋಗ ವಾಸಿಯಾಗುವದಕ್ಕೆ ಏನು ಮಾಡಬೇಕೆಂದು ಪ್ರವಾದಿಯು ಅವನಿಗೆ ಹೇಳಿದಾಗ ನಾಮನನು ಯಾಕೆ ಕೋಪಗೊಂಡನು? ಅವನಿಗೆ ಹೇಳಲ್ಪಟ್ಟ ಸರಳ ವಿಧಾನದ ನಿಮಿತ್ತವಾಗಿ! ಅವನು ಯೊರ್ದನ್ ನದಿಯಲ್ಲಿ ಮುಳುಗೇಳಬೇಕಾಗಿತ್ತು. ಇಂದು, ದೇವರ ಮಾರ್ಗವು ಅನೇಕರಿಗೆ, ವಿಶೇಷವಾಗಿ ಅದ್ಭುತಕರವಾದ ಧರ್ಮವನ್ನು ಬಯಸುವವರಿಗೆ, ಮಾಯಾ ಜಾಲವುಳ್ಳ ಕಾರ್ಯಗಳಿರುವದನ್ನು ಬಯಸುವವರಿಗೆ ಬಹಳ ಸರಳವಾದದ್ದೂ ಸುಲಭವಾದದ್ದೂ ಆಗಿದೆ. ಕ್ರಿಸ್ತನ ಸರಳ ಧರ್ಮದ ಬಗ್ಗೆ ಅವರು ನಾಚಿಕೆಪಟ್ಟುಕೊಳ್ಳುತ್ತಾರೆ. ಈಗ ಕ್ರಿಸ್ತನು

ಭೂಲೋಕದಲ್ಲಿರುತ್ತಿದ್ದರೆ, ಅವರು ಆತನ ಬಗ್ಗೆ ನಾಚಿಕೆಪಟ್ಟು ಕೊಳ್ಳುತ್ತಿದ್ದರು. ಕ್ರಿಸ್ತನ ಧರ್ಮಕ್ಕೆ ಅನೇಕರು ಕೂಡಿಸಲ್ಪಡುವದಕ್ಕೆ ಮುಖ್ಯ ಕಾರಣಗಳಲ್ಲಿ ಇದೂ ಒಂದಾಗಿದೆ. ಅನೇಕರು ಅದರಿಂದ ಬಿಟ್ಟು ಹೋಗುವದಕ್ಕೂ ಇದು ಕಾರಣವಾಗಿದೆ. ಕರ್ತನ ಭೋಜನದ ಸರಳತೆಯು ಅನೇಕರು ಅದನ್ನು ತಿರಸ್ಕರಿಸುವದಕ್ಕೆ ಕಾರಣವಾಗಿದೆ. ಅನೇಕ ಜನರಿಗೆ ಬಾಪ್ತಿಸ್ಮವು ಹುಚ್ಚುತನವಾಗಿ ಕಾಣುವದರಿಂದ ಅವರು ಕ್ರಿಸ್ತನಿಂದ ಹಿಂದಿರುಗಿ ಆತನನ್ನು ತಿರಸ್ಕರಿಸುತ್ತಾರೆ. ನೀವು ದೇವರಿಗೆ ಮೆಚ್ಚಿಕೆಯುಳ್ಳವರಾಗಿದ್ದರೆ, ಕ್ರಿಸ್ತನಲ್ಲಿರುವ ಸರಳತೆಯೊಂದಿಗೆ ನೀವು ಎಂದೂ ಅಸಂತುಷ್ಠರಾಗಬೇಡಿರಿ. "ಕ್ರಿಸ್ತನಲ್ಲಿರುವ ಯಥಾರ್ಥತೆಯನ್ನೂ ಶುದ್ಧತೆಯನ್ನೂ ಬಿಟ್ಟುಹೋಗಬೇಡಿರಿ" (2 ಕೊರಿಂಥ 11:3) ಎಂದು ಪೌಲನು ಕೊರಿಂಥದವರನ್ನು ಎಚ್ಚರಿಸಿದನು.

## ಮುಕ್ತಾಯ

ಯೇಸುವನ್ನೂ ನಮಗಾಗಿರುವ ಆತನ ಚಿತ್ತವನ್ನೂ ನಾವು ತಿರಸ್ಕರಿಸಿರುವೆವೋ? ನಮ್ಮ ಭೌತಿಕವಾದವನ್ನು ಮಾನವ ಧರ್ಮದ ಸಂಪ್ರದಾಯಗಳನ್ನೂ ಖಂಡಿಸುವದರಿಂದ ನಾವು ಆತಂಕ ಗೊಂಡಿರುವೆವೋ? ನಾವು ಮಾಡ ಬೇಕೆಂದು ಆತನು ಹೇಳಿರುವದರಲ್ಲಿಯ ನಂಬಿಕೆಯನ್ನು ನಾವು ತಿರಸ್ಕರಿಸಿರುವೆವೋ? ಪ್ರಥಮ ಶತಮಾನದಲ್ಲಿ ಯೆಹೂದ್ಯರು ಮಾಡಿದಂತೆ ನಾವು ಆತನನ್ನು ತಿರಸ್ಕರಿಸಬಾರದು.

© 2009 Truth for Today